

## ಮಹಾ ಕಬ್ಬು!

ಕಬ್ಬು... ಅಬ್ಬಬ್ಬಾ ಅಂದರೂ 8 ರಿಂದ 10 ಅಡಿ ಎತ್ತರ ಬೆಳೆಯಬಹುದು. ಬಹಳ ಚೆನ್ನಾಗಿ ಬೆಳೆದರೆ 12 ಅಡಿ ಅಂತಿಟ್ಟುಕೊಳ್ಳೋಣ. ಆದರೆ, ಹೊನ್ನಾವರದ ವಿಶ್ರಾಂತ ಪಾಧ್ಯಾಪಕ ಡಾ.ಜಿ.ಪಿ.ಪಾಟಣಕರ ಅವರು ತಮ್ಮ ಮನೆಯ ಕೈತೋಟದಲ್ಲಿ, ಸಾವಯವ ಗೊಬ್ಬರ ಬಳಸಿ 10 ತಿಂಗಳಲ್ಲಿ 20 ಅಡಿ ಎತ್ತರದ ಕಬ್ಬು ಬೆಳೆದಿದ್ದಾರೆ! ಇದು ಅಚ್ಚರಿಯೇ ಸರಿ. ಸಿರಸಿಯಲ್ಲಿ ಇತ್ತೀಚೆಗೆ ನಡೆದ ಫಲ ಪುಷ್ಪ ಪ್ರದರ್ಶನದಲ್ಲಿ ಈ ನೀಳ ಕಾಯದ ಮಹಾ ಕಬ್ಬನ್ನು ಪ್ರದರ್ಶನಕ್ಕಿಡಲಾಗಿತ್ತು. ನೆರೆದಿದ್ದವರ ಆಕರ್ಷಣೆ ಇದರ ಮೇಲೆ ಹರಿದಿತ್ತು.

ಬೀರಣ್ಣ ನಾಯಕ ಮೊಗಟಾ



## ತಿನ್ನಲಾರದ ತಿನಿಸುಗಳು

ಚಿತ್ರದಲ್ಲಿ ಕಾಣುವ ಬೆಣ್ಣೆದೋಸೆ, ಇಡ್ಲಿ, ಉಪ್ಪಿಟ್ಟು, ಕೇಸರಿಬಾತ್, ಬರ್ಗರ್, ಕೊಬ್ಬರಿ ಮಿಠಾಯಿ, ಮೈಸೂರ್ ಪಾಕ್, ಮೆಣಸಿನಕಾಯಿ ಬೋಂಡ ಜೊತೆಗೆ ಐಸ್‌ಕ್ರೀಮ್ ಇಷ್ಟೊಂದು ಬಗೆಯ ತಿಂಡಿಗಳನ್ನು ಒಂದೆ ತಟ್ಟೆಯಲ್ಲಿ ಜೋಡಿಸಿದ್ದನ್ನು ಕಂಡರೆ ಬಾಯಲ್ಲಿ ನೀರೂರದಿರದು. ಆದರೆ ಇದು ಯಾವ ಹೋಟೆಲಿನಲ್ಲಿ ಸಿಗದು. ಮದುವೆ ಮನೆಯಲ್ಲಿ ಗಂಡಿನ ಮನೆಯವರನ್ನು ಒಲಿಸಿಕೊಳ್ಳಲು ತಯಾರಾದ ತಿಂಡಿಗಳಿವು. ಹೊಳೆಹೊನ್ನೂರಿನ ಲಕ್ಷ್ಮೀ ಕುಲಕರ್ಣಿ ಅವರ ಪರಿಶ್ರಮದಲ್ಲಿ ಬೆಂಕಿ ಮತ್ತು ಬಿಸಿಲಿನಲ್ಲಿ ರೂಪುಗೊಂಡ ವರ ಪೂಜೆಯ ದಿನ ಅಲಂಕಾರಕ್ಕೆಂದು ಮಾಡಿದ ತಿನ್ನಲಾಗದ ತಿನಿಸುಗಳಿವು. ಅಂದರೆ ಮೇಣದ ಪ್ರತಿಕೃತಿಗಳು.

ಸುಲೋಚನಾ ವಾದಿರಾಜ್, ಹೊಳೆಹೊನ್ನೂರು

